# ಕರ್ನಾಟಕ ಸರ್ಕಾರ
## (ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ:ಬಿಟಿಇ 03 ಇಎಪಿ 2019

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-01,
ದಿನಾಂಕ:26/06/2019.

## ಸುತ್ತೋಲೆ

ವಿಷಯ: ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಸ್ವೀಕರಿಸಲಾದ ಅಂಕಪಟ್ಟಿಗಳ ಮಾಹಿತಿಯನ್ನು ಮರು ಟಪಾಲಿನಲ್ಲಿ ನೀಡುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸುತ್ತೋಲೆ ಸಂ:ಬಿಟಿಇ 05 ಇಸಿಎಸ್(3)2017, ದಿ:07/08/2018.

*****

ತಾಂತ್ರಿಕ ಶಿಕ್ಷಣ ಇಲಾಖೆಯ ಪರೀಕ್ಷಾ ಮಂಡಳಿಯ ವ್ಯಾಪ್ತಿಗೆ ಒಳಪಡುವ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ಕಳುಹಿಸಿಕೊಡಲಾಗಿದೆ. ಆದರೆ ಕೆಲವು ಸಂಸ್ಥೆಯ ಪ್ರಿನ್ಸಿಪಾಲರುಗಳು ಕೆಲವು ವಿದ್ಯಾರ್ಥಿಗಳ ಅಂಕಪಟ್ಟಿ ಬಂದಿಲ್ಲವೆಂದು ಪ್ರತ್ಯೇಕವಾಗಿ ವಿದ್ಯಾರ್ಥಿಗಳ ಮೂಲಕ ಅಂಕಪಟ್ಟಿ ನೀಡುವಂತೆ ಕೋರಿ ಪತ್ರವನ್ನು ಕಳುಹಿಸಿಕೊಡುತ್ತಿರುವುದು ಗಮನಕ್ಕೆ ಬಂದಿದೆ. ಈ ನಿಟ್ಟಿನಲ್ಲಿ ಈ ಕೆಳಕಂಡ ಮಾಹಿತಿಯನ್ನು ಸಂಸ್ಥೆಯ ಪ್ರಿನ್ಸಿಪಾಲರು ವೈಯಕ್ತಿಕ ಗಮನ ಹರಿಸಿ ಮರುಟಪಾಲಿನಲ್ಲಿ ಕಳುಹಿಸಿಕೊಡುವಂತೆ ಈ ಮೂಲಕ ತಿಳಿಸಲಾಗಿದೆ. ಸದರಿ ಮಾಹಿತಿಯನ್ವಯ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ನೀಡಬೇಕಾದ ಅಂಕಪಟ್ಟಿಗಳ ಮುದ್ರಣದ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

1) ತಮ್ಮ ಸಂಸ್ಥೆಗೆ ಸಿ-15 ಪಠ್ಯಕ್ರಮದಂತೆ ಸರಬರಾಜಾದ ವಿವಿಧ ಸೆಮಿಸ್ಟರ್‌ನ ಡಿಪ್ಲೊಮಾ ಅಂಕಪಟ್ಟಿ ವಿವರವನ್ನು ಒದಗಿಸುವುದು.
2) ಸಿ-15 ಪಠ್ಯಕ್ರಮದ 2015-16, 2016-17, 2017-18 ಮತ್ತು 2018-19 ನೇ ಸಾಲಿನ ಯಾವ ಯಾವ ವರ್ಷದ ಸೆಮಿಸ್ಟರ್‌ಗಳ ಡಿಪ್ಲೊಮಾ ಅಂಕಪಟ್ಟಿಗಳು ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಮುದ್ರಿಸಿ ಕಳುಹಿಸಿಕೊಡಲು ಬಾಕಿ ಇರುವ ಬಗ್ಗೆ ಅಂಕಪಟ್ಟಿಗಳ ಸಂಖ್ಯಾವಾರು ಮಾಹಿತಿಯನ್ನು ನೀಡಲು (ಏಪ್ರಿಲ್/ಮೇ, ನವೆಂಬರ್/ಡಿಸೆಂಬರ್) ತಿಳಿಸಲಾಗಿದೆ.
3) ಈಗಾಗಲೇ ಈ ಕಛೇರಿಯ ಮೇಲ್ಕಂಡ ಉಲ್ಲೇಖದ ಸುತ್ತೋಲೆಯಲ್ಲಿ ಸಂಸ್ಥೆಯಲ್ಲಿ ಸಿ-15 ಪಠ್ಯಕ್ರಮದ ಅಂಕಪಟ್ಟಿಗಳನ್ನು ಸ್ವೀಕರಿಸಿದ ನಂತರ ಅಂಕಪಟ್ಟಿಗಳ ಮಾಹಿತಿಯನ್ನು ಅಂಕಪಟ್ಟಿವಹಿಯಲ್ಲಿ ನಮೂದಿಸಿ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ವಿತರಿಸಿ, ವಿತರಣೆ ಮಾಡಿದ ಬಗ್ಗೆ ಪ್ರಾಚಾರ್ಯರು ದೃಢೀಕರಿಸಿ ಮಾಹಿತಿ ನೀಡುವಂತೆ ಸೂಚಿಸಲಾಗಿತ್ತು. ಆದರೆ ಇದುವರೆಗೂ ಸಂಸ್ಥೆಗಳಿಂದ ಸ್ವೀಕರಿಸಲಾದ ಸಿ-15 ಪಠ್ಯಕ್ರಮದ ಅಂಕಪಟ್ಟಿಗಳ ಮಾಹಿತಿಯನ್ನು ನೀಡಿರುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಪ್ರಿನ್ಸಿಪಾಲರು ಸ್ವೀಕರಿಸಲಾದ ಸಿ-15 ಪಠ್ಯಕ್ರಮದ ಅಂಕಪಟ್ಟಿಗಳ ಒಟ್ಟು ಸಂಖ್ಯೆಯನ್ನು ಪರೀಕ್ಷಾವಾರು(ಏಪ್ರಿಲ್/ಮೇ, ನವೆಂಬರ್/ಡಿಸೆಂಬರ್) ಮರು ಟಪಾಲಿನಲ್ಲಿ ದೃಢೀಕರಿಸಿ, ಈ ಕಛೇರಿಗೆ ಕಳುಹಿಸಿಕೊಡುವಂತೆ ಸೂಚಿಸಲಾಗಿದೆ.

26/06/19

ಕಾರ್ಯದರ್ಶಿ

26/6/19.

ಇವರಿಗೆ,

ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ – ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿ:

ಇ-ಆಡಳಿತ ವಿಭಾಗಕ್ಕೆ - ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.

ಮಾಹಿತಿಗಾಗಿ:
1) ಉಪ ನಿರ್ದೇಶಕರು(ಪರೀಕ್ಷೆ)
2) ಸಹಾಯಕ ನಿರ್ದೇಶಕರು(ಪರೀಕ್ಷೆ)
3). ಹಿರಿಯ ತಾಂತ್ರಿಕ ಸಹಾಯಕರು
4) ಗಣಕ ಕೇಂದ್ರ – ಮಾಹಿತಿಗಾಗಿ.

eap sv